

## ಶಿವಾ ಶಂಭುಲಿಂಗ!

ನಾನು ವೃತ್ತಿಯಲ್ಲಿ ವೈದ್ಯ. ಸ್ವಲ್ಪ ಕೀಟಲೆ ಸ್ವಭಾವ. ಆದರೆ, ವೃತ್ತಿಗಾಂಭೀರ್ಯ ಕಾಪಾಡುವುದಕ್ಕೋಸ್ಕರ ಆಸ್ಪತ್ರೆಯಲ್ಲಿ ಗಂಭೀರವಾಗಿ ಇರಬೇಕಾಗುತ್ತದೆ. ಎಲ್ಲಾದರೂ ಪ್ರವಾಸ ಹೋದಾಗ ಈ ಕೀಟಲೆ ಬುದ್ಧಿ ಹೊರಗೆ ಬರುತ್ತದೆ. 5 ವರ್ಷಗಳ ಕೆಳಗೆ ಧರ್ಮಸ್ಥಳದಲ್ಲಿ ನಡೆಯುವ ಕಾರ್ತೀಕ ದೀಪೋತ್ಸವಕ್ಕೆ ಸ್ನೇಹಿತರೆಲ್ಲಾ ಹೋಗಿದ್ದೆವು. ಅಲ್ಲಿ ನಡೆದುಕೊಂಡು ಹೋಗುತ್ತಿರುವಾಗ ಒಬ್ಬ ಈಶ್ವರ ವೇಷಧಾರಿ ಹೋಗುತ್ತಿದ್ದುದನ್ನು ನೋಡಿದೆ. ನನ್ನ ಕೀಟಲೆ ಬುದ್ಧಿ ಜಾಗೃತಗೊಂಡು ಆ ಶಿವ ವೇಷಧಾರಿಯನ್ನು ಮುಟ್ಟಿ ಕಣ್ಣಿಗೊತ್ತಿಕೊಂಡು 'ಶಿವಾ ಶಂಭುಲಿಂಗ' ಅಂದೆ. ಆಗ ಆ ಈಶ್ವರ ವೇಷಧಾರಿ 'ನಮಸ್ಕಾರ ಡಾಕ್ಟ್ರೇ, ನಾನು ನಿಮ್ಮ ಪೇಷೆಂಟ್, ನಮ್ಮದು ಹಾರನಹಳ್ಳಿ' ಅಂದಾಗ ಏನಪ್ಪ ಶಿವಾ ನಿನ್ನ ಲೀಲೆ ಅಂದುಕೊಂಡೆ!

**ಡಾ. ಚಂದ್ರಶೇಖರ್ ಕೆ.ಎಲ್., ಅರಸೀಕೆರೆ**

## ಕಾಡೆಲ್ಲಿದೆ?

'ನನ್ನದೇನಪ್ಪಾ ಎಲ್ಲಾ ಮುಗಿದುಹೋಯಿತು. ಊರು ಹೋಗು ಎನ್ನುತ್ತೇ... ಕಾಡು ಬಾ ಎನ್ನುತ್ತೇ...' ಎಂದರು ಅಜ್ಜಿ ತಮ್ಮ ಪಾಡಿಗೆ ತಾವು. ಅದಕ್ಕೆ ಪ್ರತಿಯಾಗಿ ಅವರ ಹತ್ತು ವರುಷದ ಮೊಮ್ಮಗ ಅಕ್ಷಯ ಕುಮಾರ, 'ಕಾಡು ಬಾ ಎನ್ನುವುದಕ್ಕೆ ಕಾಡು ಎಲ್ಲಿದೆ ಅಜ್ಜಿ. ಕಾಡು ಕಡಿದು ಊರು ಮಾಡಿಲ್ಲವೇ?...' ಎಂದು ಅಜ್ಜಿಯನ್ನೇ ಕೇಳಿದ!

**ಎಸ್ಸೆನ್ಕೆ, ಕಡೂರು**

